ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ನಿಗಮವೇ ಕಚ್ಚಾಮಾಲನ್ನು ನೀಡುತ್ತಿದ್ದು, ನೇಕಾರರು ತಯಾರಿಸುವ ಸಿದ್ಧ ವಸ್ತ್ರಗಳಿಗೆ ಕನ್‌ವರ್ಶನ್ ಚಾರ್ಜಸ್ ನೀಡುತ್ತಿದೆ ನೇಕಾರರು ನಿಗಮದಿಂದ ಪಡೆಯುವ ಕಚ್ಚಾಮಾಲಿಗೆ ಪೂರಕವಾಗಿ ನಿಗಮಕ್ಕೆ ರೇವಣಿ ನೀಡಲು ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರುತ್ತಾರೆ ಹಾಗೂ ವಸತಿ ಮತ್ತು ಕಾರ್ಯಾಗಾರಗಳ ನಿರ್ಮಾಣಕ್ಕಾಗಿ ನೇಕಾರರ ಪರವಾಗಿ ನಿಗಮವು ಹೆಚ್‌ಡಿಎಫ್‌ಸಿ ಮತ್ತು ರಾಜ್ಯ ಸರ್ಕಾರದಿಂದ ಸಾಲ ಪಡೆದಿರುತ್ತದೆ ಕೆಹೆಚ್‌ಡಿಸಿ ನೇಕಾರರಾಗಲಿ, ಸಹಕಾರಿ ವಲಯದ ನೇಕಾರರಾಗಲಿ ಅಥವಾ ಅಸಂಘಟಿತ ನೇಕಾರರಾಗಲಿ ಇತರೇ ಹಣಕಾಸು ಸಂಸ್ಥೆಗಳಿಂದ ಪಡೆದ ದುಡಿಮೆ ಬಂಡವಾಳ ಸಾಲಗಳು ಮತ್ತು ಗೃಹ ಸಾಲಗಳು ಮೇಲ್ಕಂಡ ಸರ್ಕಾರದ ಆದೇಶಗಳನ್ವಯ ಅರ್ಹವಿರುವುದಿಲ್ಲ

ಇ) ಸರ್ಕಾರದ ಆದೇಶದ ಸಂಖ್ಯೆ ಸಿಒ/58/ಸಿಎಲ್‌ಎಸ್/2007, ದಿ 16–4–2007, ಸಂಖ್ಯೆ ಸಿಒ/59/ಸಿಎಲ್‌ಎಸ್/2007, ದಿ 16–4–2007 ಮತ್ತು ಸಂಖ್ಯೆ ಸಿಒ/61/ಸಿಎಲ್‌ಎಸ್/2007, ದಿ 16–4–2007 ರಂತೆ ನೇಕಾರರು ಸಹಕಾರಿ ಕ್ಷೇತ್ರದ ಬ್ಯಾಂಕುಗಳಿಂದ ಪಡೆದ ಸಾಲ ಮತ್ತು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನ ಮಾಡುವ ಬಗ್ಗೆ (ಷರತ್ತಿಗಳಿಗೊಳಪಟ್ಟು) ಆದೇಶ ಹೊರಡಿಸಲಾಗಿರುತ್ತದೆ

ಈ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಕಾರ್ಯನಿರ್ವಹಿಸುತ್ತಿರುವ ನೇಕಾರರು ದುಡಿಮೆ ಬಂಡವಾಳ ಸಾಲವನ್ನು ರಾಷ್ಟ್ರೀಕೃತ ಬ್ಯಾಂಕುಗಳು/ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ/ಕರ್ನಾಟಕ ಹಿಂದುಳಿದ ಪಂಗಡಗಳ ಅಭಿವೃದ್ಧಿ ನಿಗಮದಿಂದ ಪಡೆದಿರುತ್ತಾರೆ ಸದರಿ ದುಡಿಮೆ ಬಂಡವಾಳ ಸಾಲವನ್ನು ನೇಕಾರರು ನಿಗಮದಿಂದ ಪಡೆಯುವ ಕನ್‌ವರ್ಶನ್ ಚಾರ್ಜಸ್‌ನಿಂದ ಮರುಪಾವತಿ ಮಾಡಬೇಕಾಗಿರುತ್ತದೆ

ಉ) ಸರ್ಕಾರದ ಆದೇಶಗಳ ಸಂಖ್ಯೆ-/58/ಸಿಎಲ್‌ಎಸ್/2007, ದಿ 16–4–2007, ಸಂಖ್ಯೆ ಸಿಒ/59/ಸಿಎಲ್‌ಎಸ್/2007, ದಿ 16–4–2007 ಮತ್ತು ಸಂಖ್ಯೆ ಸಿಒ/61/ಸಿಎಲ್‌ಎಸ್/2007, ದಿ 16–4–2007 ರಂತೆ ನೇಕಾರರು ಸಹಕಾರಿ ಕ್ಷೇತ್ರದ ಬ್ಯಾಂಕುಗಳಿಂದ ಪಡೆದ ಸಾಲ ಮತ್ತು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನ ಮಾಡುವ ಬಗ್ಗೆ (ಷರತ್ತಿಗಳಿಗೊಳಪಟ್ಟು) ಆದೇಶ ಹೊರಡಿಸಲಾಗಿರುತ್ತದೆ ಸದರಿ ಆದೇಶಗಳ ವ್ಯಾಪ್ತಿಗೊಳಪಟ್ಟು ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ

848(1110) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿಗ್ಗಾಂವ್ ತಾಲ್ಲೂಕು ಕಡಹಳ್ಳಿ, ಎನ್ ಎಂ ತಡಸ ನೀರಲಾಗಿ ತಿಮ್ಮಾಪೂರ ಗ್ರಾಮಗಳ ಭಾಗಗಳಲ್ಲಿ ಅತಿವೃಷ್ಟಿಯಿಂದ ರೈತರು ಬಿತ್ತಿದ

ಜಮೀನುಗಳು ಕೊಚ್ಚಿಹೋಗಿ ಜಮೀನುಗಳು ಕೊರಕಲು ಬಿದ್ದು ರೈತರಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರ ಜಮೀನುಗಳ ಒಡ್ಡುಗಳು ಒಡೆದಿರುವುದು, ಮನೆಗಳು ಬಿದ್ದಿರುವುದಕ್ಕೆ ಸರ್ಕಾರ ಪರಿಹಾರ ಕೊಡಲು ಕೈಗೊಂಡ ಯೋಜನೆ ಯಾವುದು,

ಇ) ಶಿಗ್ಗಾಂವ–ಸವಣೂರ ತಾಲ್ಲೂಕು ತಹಶೀಲ್ದಾರ ಕಾರ್ಯಾಲಯಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಎರಡೂ ತಾಲ್ಲೂಕು ತಹಶೀಲ್ದಾರ ಕಾರ್ಯಾಲಯಗಳಲ್ಲಿ ಸಿಬ್ಬಂದಿ ಭರ್ತಿ ಮಾಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು,

ಉ) ಬಿಳಿ ಸೀಮೇ ಎಣ್ಣೆ ವಿತರಕರನ್ನಾಗಿ ನೇಮಿಸಲು ಆಗದೇ ಇದ್ದಲ್ಲಿ ಪ್ರತಿ ಎರಡು ತಾಲ್ಲೂಕುಗಳಿಗೆ ಒಬ್ಬ ವಿತರಕರನ್ನಾದರೂ ನೇಮಿಸಲು ಸರ್ಕಾರ ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಬಂದಿದೆ

ಆ) ಅತಿದೃಷ್ಟಿಯಿಂದ ಹಾನಿಗೊಳಗಾದ ರೈತರ ಆಸ್ತಿ–ಪಾಸ್ತಿಗಳ ನಷ್ಟಕ್ಕೆ ಪ್ರಕೃತಿ ವಿಕೋಪ ಪರಿಹಾರ ನಿಧಿಯ ಮಾರ್ಗಸೂಚಿಗಳ ಅನ್ವಯ ಪರಿಹಾರ ನೀಡಲಾಗುವುದು

ಇ) ಹೌದು

ಈ) ಮುಂಬಡ್ತಿ ಮೂಲಕ ಶಿರಸ್ತೇದಾರರ ಹುದ್ದೆಗಳನ್ನು ತುಂಬಲಾಗುವುದು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ

ಉ) ಹೌದು

ಊ) ನೀಲಿ ಸೀಮ ಎಣ್ಣೆ ವಿತರಣ ಮಾಡುತ್ತಿರುವ ಕಂಪನಿಗಳ ಆಸಕ್ತ ಉಳ್ಳ ವಿತರಕರಿಗೆ ಬಿಳಿ ಸೀಮೆ ಎಣ್ಣೆ ಮಾಡಲಾಗುವುದು ಈಗಾಗಲೇ ನೀಲಿ ಸೀಮೆಎಣ್ಣೆ ವಿತರಣೆ ಮಾಡುತ್ತಿರುವ ವಿತರಕರು ಆಸಕ್ತಿ ವಹಿಸಿ ಮುಂದೆ ಬಂದಲ್ಲಿ ಬಿಳಿ ಸೀಮೆಎಣ್ಣೆ ಮಾರಾಟ ಮಾಡುವ ವಿತರಕರನ್ನು ನೇಮಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು

849(1111) ಶ್ರೀ ಸಿಂಧೂರ್ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ